**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ,**

**ಹೊನ್ನಾವರ**

**ಸಿ.ಸಿ. ನಂ. 571/2024**

| | | |
|---|---|---|
| ಫಿರ್ಯಾದಿಃ | | ಸರಕಾರದ ಪರವಾಗಿ<br>ಪೋಲಿಸ್ ನಿರೀಕ್ಷಕರು,<br>ಹೊನ್ನಾವರ ಪೋಲಿಸ್ ಠಾಣೆ, ಹೊನ್ನಾವರ |
| | | -ವಿರುದ್ಧ- |
| ಆರೋಪಿಃ | 1) | ಗೋಪಾಲಕೃಷ್ಣ ಗಣೇಶ ನಾಯ್ಕ<br>ವಯಸ್ಸುಃ 34 ವರ್ಷ<br>ಸಾಕೀನಃ ಚಿಕ್ಕನಕೋಡ, ದೊಡ್ಡಮನೆಕೇರಿ,<br>ತಾಲೂಕುಃ ಹೊನ್ನಾವರ |
| | 2) | ವಿಕಾಸ ರಾಮಾನಾಥಸಾ ಕಬಾಡಿ<br>ಸಾಕೀನಃ ಕುಬೇರ ಅಪಾರ್ಟಮೆಂಟ್,<br>ಕ್ಲಬ್ ರೋಡ್, ಹುಬ್ಬಳ್ಳಿ (ವಿಭಜಿತ ಪ್ರಕರಣ ದಾಖಲಾಗಿದೆ) |
| | 3) | ಸಂತೋಷ ಮಂಜಯ್ಯ ನಾಯ್ಕ<br>ವಯಸ್ಸುಃ 41 ವರ್ಷ,<br>ಉದ್ಯೋಗಃ ಕೇಬಲ್ ಆಪರೇಟರ್,<br>ವಾಸಃ ನಗರಬಸ್ತಿಕೇರಿ, ನಗರೆ-02,<br>ತಾಲೂಕುಃ ಹೊನ್ನಾವರ |

**ಆರೋಪಣೆ**

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತರ ಮೇಲೆ ಈ ಕೆಳಕಂಡ ಆರೋಪಣೆಗಳನ್ನ ಹೊರೆಸುತ್ತಿದ್ದೇನೆ.

1. ದಿನಾಂಕಃ 18-01-2024 ರಂದು ಮಧ್ಯಾಹ್ನ 03-40ರ ಸಮಯದಲ್ಲಿ 1 ನೇ ಆರೋಪಿತನು ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ 69 ರಲ್ಲಿ ಹೊನ್ನಾವರ ತಾಲೂಕಿನ ಮೂಡ್ಕಣಿ ಗ್ರಾಮದ ಹಂಗಾರಗುಂಡಿ ಹತ್ತಿರ ವಿಮೆ ಹೊಂದದ ಫೋರ್ಸ ಕಂಪನಿಯ ಗೂಡ್ಸ ಸಂಖ್ಯೆಃ ಕೆಎ-25/ಡಿ-5419 ನೇದನ್ನು ಗೇರುಸೊಪ್ಪಾ ಕಡೆಯಿಂದ ಹೊನ್ನಾವರ ಕಡೆಗೆ ಅತಿವೇಗ ಅಥವಾ ನಿಷ್ಕಾಳಜಿತದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆಮಾಡಿಕೊಂಡು ಹೋಗಿ ವಾಹನವನ್ನು ರಸ್ತೆಯ ಬಲಕ್ಕೆ ಚಲಾಯಿಸಿದ್ದು, ಅದೇ ವೇಳೆಗೆ ಎದುರಿನಿಂದ ಅಂದರೆ ಹೊನ್ನಾವರ ಕಡೆಯಿಂದ ಗೇರುಸೊಪ್ಪಾ ಕಡೆಗೆ ಹೋಗಲು ಚಾ.ಸಾ. 6 ರವರಾದ ನಾಗರಾಜ ಕನ್ಯಾ ಗೌಡನು ತನ್ನ ಬಜಾಜ ಪಲ್ಸರ್ ಮೋಟಾರ್ ಸೈಕಲ್ ನಂ. ಕೆಎ-47/ಯು-0089 ನೇದರ ಹಿಂಬದಿಯಲ್ಲಿ ಗಣೇಶ ಈಶ್ವರ ಗೌಡ ರವರನ್ನು ಕೂಡ್ರಿಸಿಕೊಂಡು ಚಲಾಯಿಸಿಕೊಂಡು ಬರುತ್ತಿದ್ದವನಿಗೆ ಎದುರಿನಿಂದ ಡಿಕ್ಕಿ ಹೊಡೆದು ಅಪಘಾತಪಡಿಸಿದ್ದರಿಂದ 1 ನೇ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ 279 ರ ಪ್ರಕಾರ ಅಪರಾಧ ಎಸಗಿರುತ್ತೀರಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

2.ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿತನು ಮೇಲೆ ಹೇಳಿದ ರೀತಿ ಅಪಘಾತವನ್ನ ಉಂಟುಮಾಡಿದ್ದರಿಂದ, ಮೋಟಾರ್ ಸೈಕಲ್ ಸವಾರರಿಬ್ಬರೂ ರಸ್ತೆಯ ಬಲಬದಿಯ ಕಾಲುವೆಗೆ ಬಿದ್ದಿದ್ದು, ಚಾಸಾ-6 ನಾಗರಾಜ ಕನ್ಯಾ ಗೌಡ ರವರಿಗೆ ಬಲಕಾಲಿಗೆ, ಬಲಕೈಗೆ ಗಂಭೀರ ಸ್ವರೂಪದ ಗಾಯ ಉಂಟು ಮಾಡಿದ್ದರಿಂದ 1 ನೇ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ 338 ರ ಪ್ರಕಾರ ಅಪರಾಧ ಎಸಗಿರುತ್ತೀರಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

3.ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಮೇಲೆ ಹೇಳಿದ ರೀತಿ ಅಪಘಾತವನ್ನ ಉಂಟುಮಾಡಿದ್ದರಿಂದ, ಮೋಟಾರ್ ಸೈಕಲ್ ಸಹ ಸವಾರನಾದ ಗಣೇಶ ಈಶ್ವರ ಗೌಡರವರಿಗೆ ತಲೆಗೆ, ಹೊಟ್ಟೆಗೆ, ಎದೆಗೆ, ಬಲಕಾಲಿಗೆ ಗಂಭೀರ ಗಾಯನೋವಾಗಿ ಸ್ಥಳದಲ್ಲೇ ಮೃತಪಟ್ಟಿದ್ದು, ಆತನ ಮರಣವು 1 ನೇ ಆರೋಪಿತನ ನಿರ್ಲಕ್ಷತನದಿಂದ ಉಂಟಾದ ಮಾನವ ಹತ್ಯೆಯಲ್ಲದ ಮರಣವಾದ್ದರಿಂದ 1 ನೇ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ 304(ಎ)ರ ಪ್ರಕಾರ ಅಪರಾಧ ಎಸಗಿರುತ್ತೀರಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

4.ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿತನು ಮೇಲೆ ಹೇಳಿದ ರೀತಿ ಅಪಘಾತವನ್ನ ಉಂಟುಮಾಡಿ ಸದರಿ ಸಂಗತಿಯನ್ನು ಪೋಲೀಸರಿಗೆ ತಿಳಿಸದೇ ಸ್ಥಳದಿಂದ ವಾಹನವನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದು, ಈ ಮೂಲಕ 1 ನೇ ಆರೊಪಿತನು ಮೋಟಾರ್ ವಾಹನ ಕಾಯ್ದೆ ಕಲಂ 187 ರ ಪ್ರಕಾರ ಅಪರಾಧ ಎಸಗಿರುತ್ತಿರಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

5.ಐದನೇಯದಾಗಿ, 3 ನೇ ಆರೋಪಿತನು ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಅಪಘಾತ ಉಂಟು ಮಾಡಿದ ಮಿಮೆ ಹೊಂದದ ಪೋರ್ಸ್ ಕಂಪನಿಯ ಗೂಡ್ಸ ನಂ. ಕೆಎ-25/ಡಿ-5419 ನೇದನ್ನು 1 ನೇ ಆರೋಪಿಗೆ ಚಾಲನೆ ಮಾಡಲು ಕೊಟ್ಟು ಈ ಮೂಲಕ 3 ನೇ ಆರೋಪಿತನು ಮೋಟಾರ್ ವಾಹನ ಕಾಯ್ದೆ ಕಲಂ 146  ಸಹಿತ 196 ರ ಪ್ರಕಾರ ಅಪರಾಧ ಎಸಗಿರುತ್ತಿರಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

6.ಆರನೇಯದಾಗಿ, 3 ನೇ ಆರೋಪಿತನು ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಅಪಘಾತ ಉಂಟು ಮಾಡಿದ ರಜಿಸ್ಟ್ರೇಷನ್ ಅವಧಿ ಮತ್ತು ಪಿಟ್ನೆಸ್ ಅವಧಿ ಮುಕ್ತಾಯವಾದ ಪೋರ್ಸ್ ಕಂಪನಿಯ ಗೂಡ್ಸ ನಂ. ಕೆಎ-25/ಡಿ-5419 ನೇದನ್ನು 1 ನೇ ಆರೋಪಿಗೆ ಚಾಲನೆ ಮಾಡಲು ಕೊಟ್ಟು ಈ ಮೂಲಕ 3 ನೇ ಆರೋಪಿತನು ಮೋಟಾರ್ ವಾಹನ ಕಾಯ್ದೆ ಕಲಂ 66(1) ಸಹಿತ 192(ಎ) ರ ಪ್ರಕಾರ ಅಪರಾಧ ಎಸಗಿರುತ್ತಿರಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

7.ಏಳನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 2 ನೇ ಆರೋಪಿತ ಮಾಲೀಕತ್ವದ ಪೋರ್ಸ್ ಕಂಪನಿಯ ಗೂಡ್ಸ ನಂ. ಕೆಎ-25/ಡಿ-5419 ನೇದನ್ನು 3 ನೇ ಆರೋಪಿತನು ಎಸ್ ಬಿ ಐ ಬ್ಯಾಂಕ್ ಹರಾಜಿನಲ್ಲಿ ಖರೀದಿಸಿದ್ದು ಅದನ್ನು ತನ್ನ ಹೆಸರಿಗೆ ನೊಂದಾಯಿಸದೇ 1 ನೇ ಆರೋಪಿಗೆ ಚಾಲನೆ ಮಾಡಲು ಕೊಟ್ಟು ಈ ಮೂಲಕ 3 ನೇ ಆರೋಪಿತನು ಮೋಟಾರ್ ವಾಹನ ಕಾಯ್ದೆ ಕಲಂ 56 ಸಹಿತ 192 ರ ಪ್ರಕಾರ ಅಪರಾಧ ಎಸಗಿರುತ್ತಾರೆ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

ಪ್ರಶ್ನೆ 1.  ನೀವು ಸದ್ರಿ ಆರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ?

1 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

ಪ್ರಶ್ನೆ 2.  ನಿಮ್ಮ ಪರವಾಗಿ ಯಾವುದಾದರೂ ಪ್ರತಿರಕ್ಷ ಸಾಕ್ಯ ಇದೆಯೇ?

1 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

(ಆರೋಪಣೆಯನ್ನ ಆರೋಪಿತರಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಆರೋಪಿತನು ನೀಡಿದ ಉತ್ತರವನ್ನ ಯಾಥವತ್ತಾಗಿ ದಾಖಲಿಸಿಕೊಳ್ಳಲಾಯಿತು.)

Sd/-

ದಿನಾಂಕಃ 12-01-2026

ಸ್ಥಳಃ ಹೊನ್ನಾವರ.

**(ಶ್ರೀ ಬಿ.ಸಿ. ಚಂದ್ರಶೇಖರ್)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**